THE TIMES OF INDIA

Online Newspaper Clipping Service
Dtd- Sunday, 17th,May- 2020



# NEP's 4 verticals to subsume UGC, AICTE

Manash.Gohain@timesgroup.com

**New Delhi:** The final draft of the National Education Policy (NEP) 2020 has proposed an overarching Higher Education Promotion Commission with four verticals — regulation, accreditation, funding, and academic standard — as part of a complete overhaul of the present regulatory system.

At present, there are separate regulators for different sets of institutions. For instance, technical institutions are under AICTE, universities and colleges under UGC, and medical colleges under Medical Council of India. Under the proposed regulatory system, distinct functions of regulation, accreditation, funding and setting academic standards will be performed by independent and empowered bodies irrespective of the branch of study.

▶ Greater autonomy, P 6

# Greater autonomy to all higher education centres

▶Continued from page 1

HEPC will have four independent verticals — National Higher Education Regulatory Council (NHERC) as common, single regulator for the entire higher education sector; National Accreditation Council (NAC), a 'meta-accrediting body'; Higher Education Grants Council (HEGC); and General Education Council (GEC) to frame expected learning outcomes for higher education programmes. These verticals will have powers for punitive action to shut down or penalise higher educational institutions for dishonesty in self-disclosures or for not conforming to basic minimum norms and standards.

A senior HRD official said these four verticals will subsume the present regulatory bodies as their specific roles will be redistributed. UGC's functions relating to academic standards will be subsumed under GEC, while its funding powers will go to HEGC. Similarly, the National Assessment and Accreditation Council will be incorporated in NAC.



The new regulatory regime will also make setting up of new institutions easier

The document advocates greater autonomy to all higher education institutions and the responsibility and accountability will rest on its board of governors. The new regulatory regime will also make setting up of new institutions easier.

Under the section 'Transforming the Regulatory System of Higher Education', the vision document states: "Ironically, this rigid inspectorial regime has also had a consistently poor record of weeding out poor practices and institutions... The regulatory system is thus in need of a complete overhaul in order to re-energise the higher education sector and enable it to thrive."

In line with autonomy granted to the premier IIMs, NEP 2020 also projects similar freedom for all higher education institutions and has a dedicated a section on 'effective governance and leadership for higher education institutions', where it states that "through a suitable system of graded accreditation and graded autonomy, and in a phased manner, all higher educational institutions will aim to become independent self-governing institutions pursuing innovation and excellence".

# ಕೋವಿಡ್ ರೋಗಿಗಳು ಎಸ್‌ಎನ್‌ಆರ್‌ಗೆ ಶಿಫ್ಟ್!

## ಜಾಲಪ್ಪ ಆಸ್ಪತ್ರೆ ಮನವಿಗೆ ಮಣಿದ ಎಂ.ಪಿ–ಆಡಳಿತ?



ಶನಿವಾರ ಕೋಲಾರದ ಎಸ್‌ಎನ್‌ಆರ್‌ನಲ್ಲಿ ಅಧಿಕಾರಿಗಳ ಸಭೆ ನಡೆಸಿದ ಡಿ.ಸಿ ಸತ್ಯಭಾಮ



ಶುಕ್ರವಾರ ಕೋವಿಡ್ ನಿಧಿಗೆ ಜಾಲಪ್ಪ ಆಸ್ಪತ್ರೆಯು 50ಲಕ್ಷರೂ. ಸ್ವೀಕರಿಸಿದ ಸಂಸದ ಮುನಿಸ್ವಾಮಿ

ಸಂ.ಕ ಸಮಾಚಾರ, ಕೋಲಾರ

ನಗರದ ಹೊರವಲಯದ ಜಾಲಪ್ಪ ಆಸ್ಪತ್ರೆಯನ್ನು ಜಿಲ್ಲಾಡಳಿತವು ಕೋವಿಡ್ ಘಟಕವಾಗಿ ಬಳಕೆ ಮಾಡುವುದನ್ನು ಕೈಬಿಡಲು ಜಿಲ್ಲಾಡಳಿತ ನಿರ್ಧರಿಸಿದೆ.

ಕೋವಿಡ್‌ಗೆ ಆಸ್ಪತ್ರೆ ಬಳಕೆಯಾಗುತ್ತಿರುವ ಕಾರಣ ನಮ್ಮಲ್ಲಿಗೆ ಸಾಮಾನ್ಯ ರೋಗಿಗಳು ನಮ್ಮಲ್ಲಿಗೆ ಬರಲು ಹೆದರುತ್ತಿದ್ದಾರೆ ಎಂಬ ಆಡಳಿತ ಮಂಡಳಿ ಮನವಿ ಪುರಸ್ಕರಿಸಿ ಜಾಲಪ್ಪ ಆಸ್ಪತ್ರೆಯಲ್ಲಿ ಇದೀಗ ಚಿಕಿತ್ಸೆ ಪಡೆಯುತ್ತಿರುವ ಐದು ಮಂದಿಯನ್ನು ನಗರದ ಎಸ್‌ಎನ್‌ಆರ್ ಸರ್ಕಾರಿ ಜಿಲ್ಲಾ ಸ್ಪತ್ರೆಗೆ ಸ್ಥಳಾಂತರಿಸಲು ನಿರ್ಧರಿಸಿದೆ.

ಶುಕ್ರವಾರ ಆರಸು ವೈದ್ಯಕೀಯ ಕಾಲೇಜಿನಿಂದ ಪ್ರಧಾನಮಂತ್ರಿ ಕೋವಿಡ್ ಪರಿಹಾರ ನಿಧಿಗೆ ನೀಡಿದ 50ಲಕ್ಷರೂ. ಚೆಕ್ ಸ್ವೀಕರಿಸಲು ತೆರಳಿದ್ದ ವೇಳೆ ಲೋಕಸಭಾ ಸದಸ್ಯ ಎಸ್.ಮುನಿಸ್ವಾಮಿ ಬಳಿ ಮೆಡಿಕಲ್ ಕಾಲೇಜು ಆಡಳಿತ ಮಂಡಳಿ ಮನವಿ ಮಾಡಿತ್ತು ಎಂದು ಮೂಲಗಳು ತಿಳಿಸಿವೆ.

ಸಂಸದರ ಸೂಚನೆ ಮೇಲೆ ಶನಿವಾರ ಎಸ್‌ಎನ್‌ಆರ್ ಆಸ್ಪತ್ರೆಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಜಾಲಪ್ಪ ಆಸ್ಪತ್ರೆಯಿಂದ ಕೋವಿಡ್ ರೋಗಿಗಳ ಸ್ಥಳಾಂತರದ ನಿರ್ಧಾರ ಕೈಗೊಂಡಿದ್ದಾರೆ.

ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಜಿಲ್ಲಾಧಿಕಾರಿ ಕೋವಿಡ್‌ನ್ನು ಎದುರಿಸಲು ನಮ್ಮ ಸರ್ಕಾರಿ ಆಸ್ಪತ್ರೆ ಬಲಿಷ್ಠವಾಗಿದೆ. ಹಾಗಾಗಿ ಜಾಲಪ್ಪ ಆಸ್ಪತ್ರೆಯಿಂದ ರೋಗಿಗಳ ಸ್ಥಳಾಂತರಕ್ಕೆ ನಿರ್ಧರಿಸಲಾಗಿದೆ ಎಂದು ಸಮರ್ಥನೆ ನೀಡಿದರು.

ಮುಳಬಾಗಿಲಿನ ಐವರು ಜಾಲಪ್ಪ ಆಸ್ಪತ್ರೆಯಲ್ಲಿ ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನು ಮುಂದೆ ಪತ್ತೆಯಾಗುವ ಎಲ್ಲ ಕೋವಿಡ್ ರೋಗಿಗಳನ್ನು ನೇರವಾಗಿ ಎಸ್‌ಎನ್‌ಆರ್‌ಗೆ ದಾಖಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಅದೇ ರೀತಿ ಶನಿವಾರ ರಾತ್ರಿ ಹೊಸದಾಗಿ ಪತ್ತೆಯಾದ ಮಾಲೂರಿನ ರೋಗಿಯನ್ನು ಎಸ್‌ಎನ್‌ಆರ್‌ಗೆ ಕರೆ ತರಲಾಯಿತು. ಜಾಲಪ್ಪ ಆಸ್ಪತ್ರೆಯಲ್ಲಿ ಮೊದಲು ರೋಗಿಗಳ ಸಂಖ್ಯೆ 500ರಿಂದ 800ರವರೆಗೆ ಇರುತ್ತಿತ್ತು ಇದೀಗ ಅದು 200–250ಕ್ಕೆ ಇಳಿದಿದೆ ಎಂದು ಹೇಳಲಾಗಿದೆ.

ಇದೇ ಕಾರಣಕ್ಕೆ ಆಡಳಿತ ಮಂಡಳಿಯು ನಮ್ಮ ಆಸ್ಪತ್ರೆಯನ್ನು ಕೋವಿಡ್‌ನಿಂದ ಮುಕ್ತಗೊಳಿಸಿ ಎಂದು ಮನವಿ ಮಾಡಿದೆ ಎಂದು ಹೇಳಲಾಗುತ್ತಿದೆ.

> ನಮ್ಮ ಜಿಲ್ಲೆಯ 7 ಕೊರೊನಾ ಸೋಂಕಿತರಲ್ಲಿ 6 ಮಂದಿ ಕೋಲಾರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ ಮತ್ತೊಬ್ಬರು ವಿಕ್ಟೋರಿಯಾದಲ್ಲಿದ್ದಾರೆ. ನಮ್ಮ ಘೋಷವಾಕ್ಯವೆಂದರೆ ಎಷ್ಟೇ ಕೋವಿಡ್ ಪಾಸಿಟೀವ್ ಬಂದರೂ ಅವರಿಗೆ ಚಿಕಿತ್ಸೆ ನೀಡಿ ಗುಣಮುಖರನ್ನಾಗಿಸಿ ಮನೆಗೆ ಕಳುಹಿಸುವುದು ಮತ್ತು ಸಾವನ್ನಪ್ಪದಂತೆ ನೋಡಿಕೊಳ್ಳುವುದು.
>
> –ಸಿ.ಸತ್ಯಭಾಮ, ಜಿಲ್ಲಾಧಿಕಾರಿ.

## ಎಸ್‌ಎನ್‌ಆರ್ ಬಲಿಷ್ಠವಾಗಿದೆ



ಎಸ್‌ಎನ್‌ಆರ್ ಸರ್ಕಾರಿ ಆಸ್ಪತ್ರೆ ಬಲಿಷ್ಠವಾಗಿದೆ. ಇಲ್ಲಿಯೇ ನಾವು ಚಿಕಿತ್ಸೆ ನೀಡುತ್ತೇವೆ. ನಮ್ಮಲ್ಲಿಯೇ ಎಲ್ಲ ತಜ್ಞರು ಇದ್ದಾರೆ. ಹಾಗಾಗಿ ಕಂಡು ಬರುವ ಎಲ್ಲ ಕೊರೋನಾ ಪೇಷೆಂಟ್‌ಗೆ ನಾವೇ ಚಿಕಿತ್ಸೆ ಕೊಡುತ್ತೇವೆ ಎಂದು ಸಭೆಯ ನಂತರ ಸತ್ಯಭಾಮ ಸುದ್ದಿಗಾರರಿಗೆ ತಿಳಿಸಿದರು.

ಜಿಲ್ಲಾಸ್ಪತ್ರೆಯಲ್ಲಿ 25 ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡುವಷ್ಟು ಸಿದ್ಧತೆ ಮಾಡಲಾಗಿದೆ. ಜಿಲ್ಲೆಯಲ್ಲಿ ಎಸ್‌ಎನ್‌ಆರ್, ಜಾಲಪ್ಪ ಮತ್ತು ಕೆಜಿಎಫ್ ಸಂಭ್ರಮ್ ಆಸ್ಪತ್ರೆಗಳನ್ನು ಕೋವಿಡ್‌ಗೆಂದು ನಿಗಧಿಪಡಿಸಿದ್ದು ನಿಜ. ಮೊದಲು ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಬೇಕು ಎಂಬ ನಿಟ್ಟಿನಲ್ಲಿ ಕೋಲಾರ ಎಸ್‌ಎನ್‌ಆರ್‌ಗೆ ಎಲ್ಲ ರೋಗಿಗಳ ಸ್ಥಳಾಂತರಕ್ಕೆ ನಿರ್ಧರಿಸಿದೆ ಎಂದು ಜಿಲ್ಲಾಧಿಕಾರಿ ಸಮರ್ಥನೆ ನೀಡಿದರು.

ಕೋವಿಡ್‌ಗೆ ಬಳಕೆಯಿಂದ ಜಾಲಪ್ಪ ಆಸ್ಪತ್ರೆಗೆ ರೋಗಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಕಾರಣಕ್ಕೆ ದಿಢೀರ್ ಸ್ಥಳಾಂತರ ಮಾಡಲಾಗುತ್ತಿದೆ ಎಂಬ ಸಾರ್ವಜನಿಕ ವಲಯದ ಆರೋಪಗಳಲ್ಲಿ ಹುರುಳಿಲ್ಲ ಎಂದು ಜಿಲ್ಲಾಧಿಕಾರಿ ತಳ್ಳಿ ಹಾಕಿದರು.

ವೈದ್ಯಾಧಿಕಾರಿಗಳ ಜತೆ ಸಭೆ ನಡೆಸಿ ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡುವ ಪೂರ್ವಸಿದ್ಧತೆ ಪರಿಶೀಲಿಸಲಾಗಿದೆ. ಚಿಕಿತ್ಸೆಗೆ ಅಗತ್ಯ ಸಲಕರಣೆಗಳ ಬಗ್ಗೆ ವೈದ್ಯರು ತಿಳಿಸಿದ್ದಾರೆ. ಅದನ್ನು ಜಿಲ್ಲಾಡಳಿತದಿಂದ ಒದಗಿಸಲಾಗುವುದು ಎಂದು ಅವರು ಹೇಳಿದರು.

ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿ ಒಂದು ತಂಡವಾಗಿ ಕೆಲಸ ಮಾಡಬೇಕು. ಯಾವುದೇ ಲೋಪದೋಷ ಬಾರದಂತೆ ಕೆಲಸ ಮಾಡಿ ಸರ್ಕಾರಿ ಆಸ್ಪತ್ರೆಯು ಖಾಸಗಿಗಿಂತ ಕಡಿಮೆಯೇನಿಲ್ಲ, ಇಲ್ಲಿಯೂ ಉತ್ತಮ ವೈದ್ಯರಿದ್ದಾರೆ ಎಂದು ಸಾಬೀತುಪಡಿಸಲು ಸೂಚಿಸಲಾಗಿದೆ ಎಂದು ವಿವರಿಸಿದರು.